ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 248/2020

(ಫ್ರಾಸಾ-5 ಚಾಸಾ-5)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 17.03.2026

| | | |
|---|---|---|
| ಸಾಕ್ಷಿದಾರರ ಹೆಸರು | - | ಲಕ್ಷ್ಮಣ್ |
| ತಂದೆಯ ಹೆಸರು | - | ಮುನಿರಾಜಪ್ಪ |
| ವಯಸ್ಸು | - | 37 ವರ್ಷ, |
| ಉದ್ಯೋಗ | - | ಫ್ಯಾಕ್ಟರಿಯಲ್ಲಿ ಕೆಲಸ |
| ವಾಸ | - | ಬಿಸುವನಹಳ್ಳಿ, ದೊಡ್ಡಬಳ್ಳಾಪುರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮತ್ತು 2 ಗೊತ್ತು. ಚಾಸಾ-1 ಮತ್ತು 2 ಹಾಗೂ ನಾನು ಪರಿಶಿಷ್ಟ ಜಾತಿಗೆ ಸೇರಿದವರು. ಆರೋಪಿತರು ಗೊತ್ತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರು ಒಕ್ಕಲಿಗ ಜಾತಿಗೆ ಸೇರಿದವರು.

2. ದಿಃ01.05.2020 ರಂದು ಕಾರ್ಮಿಕರ ದಿನಾಚರಣೆ ಇದ್ದ ಕಾರಣ ರಜೆ ಇತ್ತು. ನಾವು ಚಾಸಾ-2 ನಾಗರಾಜ್ ಇವರ ಜಮೀನಿನಲ್ಲಿ ಆಟ ಆಡುತ್ತಿದ್ದಾಗ ಸಂಜೆ 04.00-04.30 ಘಂಟೆ ಸಮಯದಲ್ಲಿ ಜಮೀನಿನಿಂದ ನೂರು ಮೀಟರ್ ದೂರ ಇರುವ ಚಾಸಾ-2 ಇವರ ಮನೆಯ ಹತ್ತಿರ 1 ಮತ್ತು 2 ನೇ ಆರೋಪಿತರು, ನವೀನ್ ಹಾಗೂ ಗಿರೀಶ್ ಬಂದು ಜಗಳ ಮಾಡುತ್ತಿದ್ದರು ಹಾಗೂ ಕಾಸು ಕೊಡಲು ಆಗದಿದ್ದರೆ ನಮ್ಮ ಮನೆಯಲ್ಲಿ ಜೀತ ಮಾಡಿ ಎಂದು ಚಾಸಾ-1 ಮತ್ತು 2 ಇವರ ಮೇಲೆ ಇಟ್ಟಿಗೆಯಿಂದ ಹಲ್ಲೆ ಮಾಡಿದರು ಹಾಗೂ ಅವಾಚ್ಯ ಶಬ್ದಗಳಿಂದ ಬೈದರು. ನೀವು ದಲಿತರು, ನಿನ್ನಮ್ಮನಾ ಜಾತಿನಾಕೇಯಾ ಎಂದು ಚಾಸಾ-1 ಮತ್ತು 2 ಇವರಿಗೆ 1 ಮತ್ತು 2 ನೇ ಆರೋಪಿತರು, ನವೀನ್ ಹಾಗೂ ಗಿರೀಶ್ ಜಾತಿ ನಿಂದನೆ ಮಾಡಿದರು.

3. ನಾನು, ಚಾಸಾ-3 ಮತ್ತು 4 ಹೋಗಿ ಗಲಾಟೆ ಬಿಡಿಸಿದ್ದು 1 ಮತ್ತು 2 ನೇ ಆರೋಪಿತರು, ನವೀನ್ ಹಾಗೂ ಗಿರೀಶ್ಆಗ ಓಡಿ ಹೋದರು. ನಾವು ಚಾಸಾ-1 ಮತ್ತು 2 ಇವರನ್ನು ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಇಟ್ಟಿಗೆಯನ್ನು ನೋಡಿ ಗುರುತಿಸಿ ಅದೇ ಇಟ್ಟಿಗೆಯಿಂದ ಆರೋಪಿತರು ಹೊಡೆದಿದ್ದರು ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕೋಶ ಕೋರಿದ್ದು ಮುಂದೂಡಲಾಯಿತು)

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು